ಸಿ.ಇ.ಟಿ. ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ: ಈಗ ಸರ್ಕಾರಕ್ಕೆ ವ್ಯಾಟ್ ವಿಧೇಯಕ ಮಾಡಬೇಕೆಂದಿತ್ತು, ಅದು ಆಯಿತು. ನಮಗೆ ಬರಗಾಲ ಪರಿಸ್ಥಿತಿ ಬಗ್ಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ಸಿ.ಇ.ಟಿ. ಬಗ್ಗೆ ಈ ಸರ್ಕಾರದ ನಿರ್ಧಾರ ಏನೆಂದು ಉತ್ತರ ಬಂದಿಲ್ಲ. ಪೇರೆಂಟ್ಸ್ ತ್ರಿಶಂಕು ಸ್ಥಿತಿಯಲ್ಲಿ ಇದ್ದಾರೆ. ದಯವಿಟ್ಟು ಕ್ಷಮಿಸಬೇಕು. ಇಲ್ಲಿ ಸಣ್ಣ ಬಿಲ್ಲು, ದೊಡ್ಡ ಬಿಲ್ಲು ಎಂಬ ಪ್ರಶ್ನೆ ಬರುವುದೇ ಇಲ್ಲ. ಕಾನೂನಿನ ದೃಷ್ಟಿಯಿಂದ ಅದು ಒಂದೇ.

ಛೇರ್ಮನ್ : ಇದೊಂದನ್ನು ಮುಗಿಸಿ, ನಂತರ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಲ್ಲ ಸ್ವಾಮಿ. ಎಲ್ಲವನ್ನೂ ಮಾಡಬೇಕೆಂದು ಹೇಳಿದರೆ, ಬಜೆಟ್ ಬಗ್ಗೆ ಯಾವಾಗ ಚರ್ಚೆ ಮಾಡುವುದು? 28ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಮೀನುಗಾರಿಕೆ ವಿಧೇಯಕವೊಂದನ್ನು ಪಾಸ್ ಮಾಡಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದನ್ನು ನೀವು ಮುಂಚಿತವಾಗಿ ಮಾಡಿಕೊಳ್ಳಬೇಕಿತ್ತು. ಬಜೆಟ್ ಬಗ್ಗೆ ಸದಸ್ಯರುಗಳು ಯಾವಾಗ ಮಾತನಾಡುವುದು? ಒಂದುಕಡೆ ಇವರೆಲ್ಲಾ ಹೇಳುತ್ತಾರೆ. ಫ್ರಂಟ್ ಬೆಂಚ್ ನಲ್ಲಿರುವವರೇ ಎಲ್ಲಾ ಮಾತನಾಡುತ್ತಾರೆಂದು ಹೇಳುತ್ತಾರೆ. ಜನರು, ನೀವೇನೂ ಬಜೆಟ್ ಬಗ್ಗೆ ಮಾತನಾಡುವುದೇ ಇಲ್ಲವೆಂದು ಹೇಳುತ್ತಾರೆ. ಸರ್ಕಾರದ ಜೊತೆ ಶಾಮೀಲು ಆಗಿದ್ದೀರಿ ಎಂದು ಹೇಳುತ್ತಾರೆ. ಹಾಗಾದರೆ, ನಾವು ಮಾತನಾಡುವುದು ಬೇಡವೇ? ಪ್ರತಿ ದಿನ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ಕುಳಿತರೆ, ಟೈಮ್ ಎಲ್ಲಿದೆ ಎಂದು ಕೇಳುವುದು. ವ್ಯಾಟ್ ಬಿಲ್ಲನ್ನು ಮಾಡಿಕೊಡಬೇಕೆಂದು ಹೇಳಿದಿರಿ, ಆಫೀಸರುಗಳು ಪ್ರತಿ ದಿನಾ ಬಂದು ಕುಳಿತುಕೊಂಡು ಹೋಗುವುದನ್ನು ನೋಡಿ, ನೋಡಿ ಕರುಣೆಯಿಂದ ಪಾಪ ಅವರಾದರೂ ಹೋಗಲಿ ಎಂದು ಅದನ್ನು ಮಾಡಿಕೊಟ್ಟಿದ್ದೇವೆ. ಜನಗಳ ಪರವಾಗಿ ಮಾಡಿದ್ದೇವೆ. ದಯಮಾಡಿ, ಬಜೆಟ್ ಬಗ್ಗೆ ನಮ್ಮಕಡೆಯವರು ಮಾತನಾಡುತ್ತಾರೆ, ಅವಕಾಶ ಕೊಡಿ. ದಿನವೂ ಇದೇ ವ್ಯವಹಾರ ನಡೆಯುತ್ತಾ ಇದೆಯಲ್ಲ.

ಛೇರ್ಮನ್ : ಇದನ್ನು ಮುಗಿಸಿದ ಕೂಡಲೇ ಬಜೆಟ್ ಚರ್ಚೆಯನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಏನಾದರೂ ವಿಷಯ ಪ್ರಸ್ತಾಪ ಮಾಡಿದಾಗ you cannot brush aside like that.

ಛೇರ್ಮನ್ : ಹಾಗೆ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ನೀವು ಉತ್ತರ ಕೊಡಿ. ನಾನೇಕೆ ಇಲ್ಲಿ ನಿಂತಿದ್ದೇನೆ.

ಛೇರ್ಮನ್ : ಈ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಂಡ ಮೇಲೆ, ಆಯವ್ಯಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.